# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 829(913)
ವಿಧಾನ ಪರಿಷತ್ ಸದಸ್ಯರ ಹೆಸರು : ಶ್ರೀ ಕೆ.ಎಸ್.ನವೀನ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)
ಉತ್ತರಿಸಬೇಕಾದ ದಿನಾಂಕ : 19-08-2025
ಉತ್ತರಿಸುವ ಸಚಿವರು : ಮಾನ್ಯ ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಸಚಿವರು

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ | ನಗರ ಸಭೆ ಮತ್ತು ಮಹಾನಗರ ಪಾಲಿಕೆಗಳಲ್ಲಿ ಜನನ ಮತ್ತು ಮರಣ ಹಾಗೂ ಇತರೆ ಯಾವ ಯಾವ ಪ್ರಮಾಣ ಪತ್ರಗಳನ್ನು ಜನ ಸಾಮಾನ್ಯರಿಗೆ ನೀಡಲಾಗುವುದು; (ವಿವರ ಒದಗಿಸುವುದು) | ನಗರಸಭೆ ಮತ್ತು ಮಹಾನಗರ ಪಾಲಿಕೆಗಳಲ್ಲಿ ಜನನ ಮತ್ತು ಮರಣ ಹಾಗೂ ಇತರ ಯಾವುದೇ ಪ್ರಮಾಣ ಪತ್ರಗಳನ್ನು ಹೊರತುಪಡಿಸಿ ಯಾವುದೇ ಪ್ರಮಾಣ ಪತ್ರಗಳನ್ನು ನೀಡಲಾಗುವುದಿಲ್ಲ. |
| ಆ | ಕಳೆದ 3 ವರ್ಷದ ಹಿಂದೆ ಸದರಿ ಪ್ರಮಾಣ ಪತ್ರಗಳನ್ನು ಪಡೆಯಲು ಸರ್ಕಾರ ಪಡೆಯುತ್ತಿದ್ದ ಶುಲ್ಕ ಎಷ್ಟು; | ಭಾರತ ಸರ್ಕಾರದ 1969 ರ ಜನನ, ಮರಣ ನೋಂದಣಿ ಅಧಿನಿಯಮದನ್ವಯ, ಕರ್ನಾಟಕ ಜನನ, ಮರಣ ನೋಂದಣಿ ನಿಯಮ 1999 ಅನ್ನು ರೂಪಿಸಲಾಗಿದ್ದು, ಅಧಿಸೂಚನೆ ಸಂಖ್ಯೆ: ಪಿಡಿಎಸ್ 208 ಎಸ್‌ಎಂಸಿ 99, ದಿನಾಂಕ: 30.12.1999ರ ನಿಯಮದಂತೆ ಜನನ, ಮರಣದ ಪ್ರಮಾಣ ಪತ್ರ **ಮೊದಲನೇ ಪ್ರತಿಯನ್ನು ಅರ್ಜಿದಾರರಿಗೆ ಉಚಿತವಾಗಿ ನೀಡಲಾಗುತ್ತಿದೆ.** ನಿಯಮ 13ರನ್ವಯ ಪ್ರತಿ ಜನನ ಮತ್ತು ಮರಣ ಪ್ರಮಾಣ ಪತ್ರಗಳ ಹೆಚ್ಚುವರಿ ಪ್ರತಿಗಳಿಗೆ ರೂ. 5/- ಶುಲ್ಕವನ್ನು ಪಡೆಯಲಾಗುತ್ತಿತ್ತು. |
| ಇ | ಪ್ರಸ್ತುತ ಸದರಿ ಪ್ರಮಾಣ ಪತ್ರಗಳಿಗೆ ಸರ್ಕಾರ ಪಡೆಯುತ್ತಿರುವ ಶುಲ್ಕ ಎಷ್ಟು; ಸದರಿ ಪ್ರಮಾಣ ಪತ್ರಗಳ ಬೆಲೆ ಏರಿಕೆ ಮಾಡಿರುವುದರಿಂದ ಸರ್ಕಾರಕ್ಕೆ ಬಂದಿರುವ ಆದಾಯ ಎಷ್ಟು? (ಸಂಪೂರ್ಣ ವಿವರ ಒದಗಿಸುವುದು) | ಭಾರತ ಸರ್ಕಾರದ ಜನನ, ಮರಣ ನೋಂದಣಿ ಅಧಿನಿಯಮ 1969ಕ್ಕೆ, 2023 ರಲ್ಲಿ ತಿದ್ದುಪಡಿ ಮಾಡಿ ಜನನ, ಮರಣ ನೋಂದಣಿ ತಿದ್ದುಪಡಿ ಅಧಿನಿಯಮ 2023ನ್ನು ಅಕ್ಟೋಬರ್ 1, 2023 ರಿಂದ ದೇಶಾದ್ಯಂತ ಜಾರಿಗೊಳಿಸಲಾಗಿದೆ.<br>ಭಾರತ ಸರ್ಕಾರದ ಅಧಿನಿಯಮದಂತೆ ಕರ್ನಾಟಕ ಜನನ, ಮರಣ ನೋಂದಣಿ ತಿದ್ದುಪಡಿ ನಿಯಮಗಳ ಅಧಿಸೂಚನೆ ಸಂಖ್ಯೆ: ಪಿಡಿಎಸ್ 90 ಎಸ್‌ಎಸ್‌ಎಂ 2024, ದಿನಾಂಕ 31.12.2024 ರಂತೆ ಜನನ, ಮರಣದ ಪ್ರಮಾಣ ಪತ್ರ **ಮೊದಲನೇ ಪ್ರತಿಯನ್ನು ಅರ್ಜಿದಾರರಿಗೆ ಉಚಿತವಾಗಿ ನೀಡಲಾಗುತ್ತಿದೆ.** ನಂತರದ ಹೆಚ್ಚುವರಿಯಾಗಿ ಪಡೆಯುವ ಪ್ರತಿಯೊಂದು ಪ್ರತಿಗೆ ರೂಪಾಯಿ.50/- ಅನ್ನು ನಿಗದಿಪಡಿಸಲಾಗಿದೆ.<br>• ಜನವರಿ 2024 ರಿಂದ ಜುಲೈ 2024 ರವರೆಗೆ ರೂ. 1,15,12,002/- ಶುಲ್ಕ ಸಂಗ್ರಹವಾಗಿರುತ್ತದೆ.<br>• ಜನವರಿ 2025 ರಿಂದ ಜುಲೈ 2025 ರವರೆಗೆ ರೂ. 7,79,19,926/- ಶುಲ್ಕ ಸಂಗ್ರಹವಾಗಿರುತ್ತದೆ.<br><br>ಜಿಲ್ಲಾವಾರು ವಿವರಗಳನ್ನು **ಅನುಬಂಧ**ದಲ್ಲಿ ನೀಡಲಾಗಿದೆ. |

ಸಂಖ್ಯೆ: ಪಿಡಿಎಸ್ 140 ಎಸ್‌ಎಂಸಿ 2025

(ಡಿ.ಸುಧಾಕರ್)
ಯೋಜನೆ, ಕಾರ್ಯಕ್ರಮ ಸಂಯೋಜನೆ
ಮತ್ತು ಸಾಂಖ್ಯಿಕ ಸಚಿವರು

ಅನುಬಂಧ

ಜನನ ಮರಣ ನೋಂದಣಿಯಲ್ಲಿ ಸಂಗ್ರಹವಾಗಿರುವ ಜಿಲ್ಲಾವಾರು ವಿವರ

| ಕ್ರ.ಸಂ | ಜಿಲ್ಲೆ | ಜನವರಿ 2024 ರಿಂದ ಜುಲೈ 2024 | ಜನವರಿ 2025 ರಿಂದ ಜುಲೈ 2025 |
|---|---|---|---|
| 1 | ಬಾಗಲಕೋಟೆ | 427162 | 3358547 |
| 2 | ಬಳ್ಳಾರಿ | 237590 | 1982711 |
| 3 | ಬೆಳಗಾವಿ | 569365 | 4345992 |
| 4 | ಬೆಂಗಳೂರು ಗ್ರಾಮಾಂತರ | 103533 | 712494 |
| 5 | ಬೆಂಗಳೂರು ದಕ್ಷಿಣ | 143977 | 925208 |
| 6 | ಬೆಂಗಳೂರು ನಗರ | 1986181 | 12321259 |
| 7 | ಬೀದರ್ | 261811 | 1972470 |
| 8 | ಚಾಮರಾಜನಗರ | 120736 | 822348 |
| 9 | ಚಿಕ್ಕಬಳ್ಳಾಪುರ | 162793 | 1229698 |
| 10 | ಚಿಕ್ಕಮಗಳೂರು | 156730 | 1146882 |
| 11 | ಚಿತ್ರದುರ್ಗ | 212980 | 1547036 |
| 12 | ದಕ್ಷಿಣ ಕನ್ನಡ | 736978 | 3862935 |
| 13 | ದಾವಣಗೆರೆ | 508936 | 2980031 |
| 14 | ಧಾರವಾಡ | 473691 | 3209026 |
| 15 | ಗದಗ | 165093 | 1653629 |
| 16 | ಹಾಸನ | 206055 | 1676755 |
| 17 | ಹಾವೇರಿ | 196415 | 1433898 |
| 18 | ಕಲಬುರಗಿ | 594346 | 3612846 |
| 19 | ಕೊಡಗು | 70177 | 607744 |
| 20 | ಕೋಲಾರ | 209945 | 1738806 |
| 21 | ಕೊಪ್ಪಳ | 218558 | 1710499 |
| 22 | ಮಂಡ್ಯ | 321153 | 1974073 |
| 23 | ಮೈಸೂರು | 977993 | 5514018 |
| 24 | ರಾಯಚೂರು | 314856 | 2099662 |
| 25 | ಶಿವಮೊಗ್ಗ | 367468 | 2593429 |
| 26 | ತುಮಕೂರು | 365010 | 2561540 |
| 27 | ಉಡುಪಿ | 366545 | 3064985 |
| 28 | ಉತ್ತರ ಕನ್ನಡ | 264763 | 1811780 |
| 29 | ವಿಜಯನಗರ | 159707 | 1155548 |
| 30 | ವಿಜಯಪುರ | 428871 | 3091587 |
| 31 | ಯಾದಗಿರಿ | 182584 | 1202490 |
| | **ಒಟ್ಟು** | **1,15,12,002** | **7,79,19,926** |

Chief Registrar of Births and Deaths